Doc 492
T-P-2

Reg No B C 155 9 — 6 — 72

55th Year of Publication ★★ 'Satyavadi' daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters




ರಾಷ್ಟ್ರಪಲ್ಲಿ ಪ್ರಥಮ
ಮಹೋತ್ಸವ
ಪರಮೇಶಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

# ಹುಡುಗಿ ಅಪಹರಣ ಪ್ರಯತ್ನ - ಪೋಲೀಸ್ ಪಾದೆಯ ದಸ್ತಗಿರಿ

### ಬಸವಲಿಂಗಪ್ಪನವರ ಸೂಚನೆ

ಚಿಂತಾಮಣಿಯ ಪುರಸಭೆ ಕಟ್ಟಡದ ಆವರಣದೊಳಗೆ ಸ್ಥಾಪಿಸಿರುವ ಆನೆ ಪ್ರತಿಮೆಯನ್ನು ಕೂಡಲೆ ತೆಗೆಯುಲು ಪೌರಾಡಳಿತ ಮಂತ್ರಿ ಶ್ರೀ ಬಿ ಬಸವಲಿಂಗಪ್ಪನವರು ಸೂಚನೆ ಕೊಟ್ಟಿರುವರು

★

### ಸಂಸತ್ ಸದ್ಯಸ್ಯತ್ವ ಪಡೆಯಲಿ

ಮಾಜಿ ರಾಜರಿಗೆ ಹಣಗಾಮಿ ಭತ್ಯೆ ನೀಡುವ ಯಾವುದೇ ಯೋಜನೆ ಜಾರಿಗೆ ತರುವ ಮೊದಲು ಸಂಸತ್ ಸದ್ಯಸ್ಯತ್ವ ಪಡೆಯಬೇಕೆಂದು ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಶ್ರೀ ಭೂಪೇಶ ಗುಪ್ತರು ನವದೆಹಲಿಯಲ್ಲಿ ತಿಳಿಸಿರುವರು

★

### ಬಂಧನ — ಜಾಮೀನು

ಗುಡಿಬಂಡೆಯಿಂದ ಬಂದಿರುವ ವರದಿಯ ಪ್ರಕಾರ, ಮನೆಯೊಂದರಿಂದ ಒಬ್ಬ ಮೈನರ್ ಬಾಲಕಿಯನ್ನು ಅಪಹರಿಸುವ ಪ್ರಯತ್ನದಲ್ಲಿ ಓರ್ವ ಪೋಲೀಸ್ ಪ್ಯಾದೆ ಮತ್ತು ಓರ್ವ ಬಸ್ ಕಂಡಕ್ಟರ್ ಬಂಧಿತರಾಗಿ ಆನಂತರ ಜಾಮೀನು ಮೇಲೆ ಬಿಡುಗಡೆ ಆದರು

★

### ಡೀಸಿಗೆ ಸೂಚನೆ

ಸ್ಕೂಟರ್ ಅಪಘಾತಕ್ಕೆ ಒಳಗಾದ ಮೈಸೂರಿನ ಪತ್ರಿಕೋದ್ಯೋಗಿ ಶ್ರೀ ಎ.ಎ.ವಿ. ಗುಂಡಪ್ಪನವರನ್ನು ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಗೆ ತಂದಾಗ ಅಲ್ಲಿ ಕರ್ತವ್ಯ ನಿರ್ವಹಣೆಯಲ್ಲಿದ್ದ ವೈದ್ಯರು ಅಲಕ್ಷ್ಯದಿಂದ ನಡೆದುಕೊಂಡರೆಂದು ವಿಧಾನ ಪರಿಷತ್ ಸದಸ್ಯ ಶ್ರೀ ಎಂ. ಸತ್ಯನಾರಾಯಣರಾವ್‌ರವರು ಮಾಡಿದ ಆಪಾದನೆಯನ್ನು ಕುರಿತು ತನಿಖೆ ಮಾಡಲು ಮೆಡಿಕಲ್ ಕಾಲೇಜ್‌ನ ಡೀನ್‌ರಿಗೆ ಸೂಚಿಸಿರುವುದಾಗಿ ಆರೋಗ್ಯ ಮಂತ್ರಿ ಶ್ರೀ ಹೆಚ್. ಸಿದ್ಧವೀರಪ್ಪನವರು ಬೆಂಗಳೂರಿನಲ್ಲಿ ಪತ್ರಿಕೆಯವರಿಗೆ ತಿಳಿಸಿದರು.

### ಬಾಂಬು ವಶಕ್ಕೆ

ಕಡಪದಲ್ಲಿ ಬಸ್‌ನಲ್ಲಿ ಹೋಗುತ್ತಿದ್ದ ಒರ್ವನಿಂದ ಮೂರು ದೇಶೀಯ ತಯಾರಿಕೆ ಬಾಂಬುಗಳು ಹಾಗೂ ಚೂರಿಗಳನ್ನು ವಶಪಡಿಸಿಕೊಂಡು ಪೋಲೀಸರು ಬಂಧಿಸಿದರು.

★

### ಮುಜಿಬರ್‌ರಿಂದ ಎಚ್ಚರಿಕೆ

ಕಾಳಸಂತೆ ವ್ಯಾಪಾರಿಗಳು, ಅಧಿಕದಾಸ್ತಾನುಗಾರರು ತಮ್ಮ ಈ ಕೆಟ್ಟ ನಡವಳಿಕೆ ಬಿಡದಿದ್ದರೆ ಅಂಥವರನ್ನು ಗುಂಡಿಕ್ಕಿಸಾಯಿಸುವ ಶಾಸನ ಮಾಡುವುದಾಗಿ ಪ್ರಧಾನಿ ಶ್ರೀ ಮುಜಿಬರ್ ರೆಹಮಾನರು ಢಾಕ್ಕಾದಲ್ಲಿ ಬಹಿರಂಗ ಸಭೆಯೊಂದರಲ್ಲಿ ತಿಳಿಸಿದರು.

●

### 6 ಮಕ್ಕಳ ಮರಣ

ಕಲ್ಕತ್ತಾದಲ್ಲಿ ಒಂದು ಮಾರ್ಟರ್ ಷೆಲ್ ಇಟ್ಟುಕೊಂಡು ಆಟವಾಡುತ್ತಿದ್ದ ಆರು ಮಕ್ಕಳು ಆದಕ ಸಿಡಿತದಿಂದ ಮರಣಹೊಂದಿದರು.

★

### ಜಾಕ್‌ಪಾಟ್ ಹಣ

ಬುಧವಾರ ಬೆಂಗಳೂರು ಕುದುರೆಪಂದ್ಯದಲ್ಲಿ ಜಾಕ್‌ಪಾಟ್ ಹಣ ರೂ. 116586 ನ್ನು ಮುಂದಕ್ಕೆ ಇಡಲಾಯಿತು.

★

### ಸರ್ಕಾರಿ ಆಜ್ಞೆ ರದ್ದು

ಗದಗ ಬೆಟಗೇರಿ ಪೌರಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಚುನಾವಣೆ ಗುರುತು ಕಾಯ್ದಿಟ್ಟ ಸರ್ಕಾರಿ ಆಜ್ಞೆಯನ್ನು ಶ್ರೇಷ್ಠ ನ್ಯಾಯಾಲಯ ಹೊಡೆದಿದೆ

★

### ಕದನ ವಿರಾಮ ಉಲ್ಲಂಘನೆ

ಕಳೆದ ಒಂದು ವಾರದಲ್ಲಿ ಪಾಕೀಸ್ತಾನ ಪಂಜಾಬಿನ ಅನೇಕ ಭಾಗಗಳಲ್ಲಿ ಅನೇಕ ಬಾರಿ ಕದನ ವಿರಾಮ ಉಲ್ಲಂಘನೆ ಮಾಡಿರುವುದಾಗಿ ಚಂಡೀಘರದಿಂದ ವರದಿಬಂದಿದೆ

### ಗೋಮಟೇಶ್ವರ ಪ್ರತಿಷ್ಠೆ

ಮುಂದಿನ ಮಾರ್ಚ್ ತಿಂಗಳೊಳಗೆ 39 ಅಡಿಗಳ ಒಂದೇ ಶಿಲೆಯ ಗೋಮಟೇಶ್ವರ ವಿಗ್ರಹವನ್ನು ಧರ್ಮಸ್ಥಳದ ಹತ್ತಿರ ಗುಡ್ಡವೊಂದರ ಮೇಲೆ ಪ್ರತಿಷ್ಠೆ ಮಾಡಲಾಗುವುದೆಂದು ಕಡೂರಿನಲ್ಲಿ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಡೆಯವರು ತಿಳಿಸಿದರು. ಕಾರ್ಕಳದಲ್ಲಿ ತಯಾರಾಗಿರುವ ಈ ಪ್ರತಿಮೆಯನ್ನು ಧರ್ಮಸ್ಥಳಕ್ಕೆ ತರಲು ಬೊಂಬಾಯಿನ ಇಂಜಿನಿಯರಿಂಗು ಸಂಸ್ಥೆಗೆ ವಹಿಸಲಾಗಿದೆಯೆಂದು, ಆ ಕಾರ್ಯಕ್ಕೆ ಆಗುವ ವೆಚ್ಚ 5 ಲಕ್ಷ ರೂಪಾಯಿಗಳೆಂದು ಅವರು ನುಡಿದ್ದರು.

★

### ಅಗ್ನಿ ಅನಾಹುತ

ಆಂಧ್ರ ಪ್ರದೇಶದಲ್ಲಿ ಬೇಸಿಗೆಯಲ್ಲಿ ನಿನ್ನೆ ವರೆಗೆ ಆದ ಬೆಂಕಿ ಅನಾಹುತದಲ್ಲಿ ಹದಿನೈದು ಜನರು ಸತ್ತಿರುವರು.

★

### ಆಗಲೇ ಗೊತ್ತಿತ್ತು

ಕಾಶಿಯಲ್ಲಿದ್ದ ಸುಶ್ರುತನಿಗೆ ಕ್ರಿಸ್ತ ಪೂರ್ವ 600 ರಲ್ಲಿಯೇ ಶಸ್ತ್ರ ಚಿಕಿತ್ಸೆ ಗೊತ್ತಿದ್ದಿತೆಂದು ಪ್ರಕಟವಾಗಿದೆ.

○

### 7 ಮಂದಿಯ ಮರಣ

ಕರಾಚಿ ನಗರದ ಕೈಗಾರಿಕೆ ಭಾಗದಲ್ಲಿ ಪೋಲೀಸರಿಗೂ ಕಾರ್ಮಿಕರಿಗೂ ಆದ ಘರ್ಷಣೆಯಲ್ಲಿ 7 ಮಂದಿ ಸತ್ತರು.

★

### ಏಷ್ಯ ಸುಂದರಿ

ಮಾನಿಲದಲ್ಲಿ ಮುಂದಿನ ತಿಂಗಳು 8ನೇ ತಾರೀಖು ನಡೆಯುವ ಏಷ್ಯ ಸುಂದರಿ ಸ್ಪರ್ಧೆಯಲ್ಲಿ ಹದಿನೆಂಟು ದೇಶಗಳು ಭಾಗವಹಿಸುವುವು.

★ ಏಷ್ಯದ ಮೊದಲನೆಯ ವಾಣಿಜ್ಯಮೇಳ ಈ ವರ್ಷ ಉತ್ತರಾರ್ಧದಲ್ಲಿ ನವದೆಹಲಿಯಲ್ಲಿ ಆರಂಭವಾಗಲಿದೆ.

### ದಿವ್ಯವಾಣಿ

ಮಡದಿ ಪ್ರೇಮ ಸೃಷ್ಟಿಸುತ್ತದೆ, ಪಿತ್ರ ಪ್ರೇಮ ಬಾಳನ್ನು ಸರಿಪಡಿಸುತ್ತದೆ, ದಾರಿ ತಪ್ಪಿದ ಪ್ರೇಮ ಬದುಕನ್ನು ಕಂಗೆಡಿಸುತ್ತದೆ. — ಬೇಕನ್.

### ಬೆಲೆ ಏರಿಕೆ

ಭಂಗಾರದ ಬೆಲೆ ಬ್ರಿಟನ್‌ನಲ್ಲಿ ಔನ್ಸಿಗೆ 64 ಡಾಲರಿಗೆ ಏರಿದೆ.

○

### ಬಂಧಿತರ ಸಂಖ್ಯೆ

ಉಳಿತಾಯ ಭೂಮಿ ಅಕ್ರಮಣ ಹಾಗೂ ಹೊತೆಇಜಾಡ ತೆರಿಗೆ ವಿರುದ್ಧದ ಚಳವಳಿಯಲ್ಲಿ 877 ಜನರ ಬಂಧನವಾಗಿದೆ ಎಂದು ತಿರುವೇಂದ್ರಂ ವಾರ್ತೆ ತಿಳಿಸುತ್ತದೆ.

★

### ಪರ್ಯಾಲೋಚನೆಯಲ್ಲಿ

ಪಾಂಡಿಚೆರಿಯಲ್ಲಿ ಕುದುರೆಪಂದ್ಯ ಆರಂಭಿಸುವುದು ಪರ್ಯಾಲೋಚನೆಯಲ್ಲಿದೆ.

○

### ಒಳ್ಳೆಯ ಮಾರುಕಟ್ಟೆ

ಭಾರತದ ಬಟ್ಟೆಗಳಿಗೆ ಆಸ್ಟ್ರೇಲಿಯಾದಲ್ಲಿ ಒಳ್ಳೆಯ ಗಿರಾಕಿ ಇದೆ.

★

### ಬಹುಮಾನ ನೀಡಿಕೆ

ನವೆಂಬರು ತಿಂಗಳಲ್ಲಿ ನಡೆಯುವ ತಿರುವಾಂಕೂರು ದೇವಸ್ಥಾನ ಮಂಡಲಿಯ ಸ್ವರ್ಣೋತ್ಸವ ಅಂಗವಾಗಿ ಉತ್ತಮ ಹಿಂದೂ ಗ್ರಂಥಗಳಿಗೆ ನಾಲ್ಕು ಬಹುಮಾನಗಳನ್ನು ಕೊಡಲಾಗುವುದೆಂದು ತಿರುವೇಂದ್ರಂನಿಂದ ವರದಿ ಬಂದಿದೆ.

○ ವಿಶ್ವಸಂಸ್ಥೆ ಏಜೆನ್ಸಿಗಳಿಗೆ ಅವೇರಿಕ ಹಣ ನೀಡಿಕೆ ಇಳಿಯುವುದು.

★ ೯ನೇ ಲೋಕಸಭೆ ಅಧಿವೇಶನವು ಬರುವ ತಿಂಗಳು 31 ನೇ ತಾ. ನಿಂದ ಆರಂಭವಾಗುವುದು.

ಶಾಂತಿವಲಯವಾಗಿರಲಿ

ನವದೆಹಲಿ— ಹಿಂದೂಸಾಗರದಲ್ಲಿ ಶಾಂತಿವಲಯವಿರುವುದು ಅಪೇಕ್ಷಣೀಯವೆಂದು ಶ್ರೀಲಂಕಾ ಪ್ರಧಾನಿ ಸಿರಿಮಾವೋ ಅಭಿಪ್ರಾಯ ವ್ಯಕ್ತಪಡಿಸಿರುವರು.

●

ಕೀಟನಾಶಕದಿಂದ ರಕ್ಷಣೆ

ನವದೆಹಲಿ— ದೇಶದಲ್ಲಿರುವ ಬೇಸಾಯ ಭೂಮಿಯಲ್ಲಿ 10-80 ಲಕ್ಷ ಹೆಕ್ಟೇರು ಪ್ರದೇಶದ ಮೇಲೆ ವಿಮಾನ ಮೂಲಕ ಕೀಟನಾಶಕಗಳನ್ನು ಪ್ರತಿವರ್ಷ ಸಿಂಪಡಿಸಲಾಗುತ್ತಿದೆ.

★

ಒಲಂಪಿಕ್ ಪೂಜಾರಿ ಈಗಾಗಲೇ ಹಾಜರಿ

ಮ್ಯೂನಿಚ್— ಒಲಂಪಿಕ್ ಕಾಣಲು ಬಂದ ಪ್ರೇಕ್ಷಕರಿಗಾಗಿ ರೆವರೆಂಡ್ ಹೈನ್ಸ್ ಸುಮ್ಮರ್ಸ್ ಎಂಬ ಕ್ರೈಸ್ತ ಪೂಜಾರಿಗಳು ಎರಡು ಇಗರ್ಜಿಗಳನ್ನೂ, ಪೌರೋಹಿತ್ಯಕ ಭಾಷಣ ಕೊಡಲು ಮತ್ತು ಯುವಕರ ಸಭೆ ಸೇರಲು ಬೇಕಾಗುವಂತೆ ಹಾಲ್‌ಗಳನ್ನೂ, ಪಾದ್ರಿಗಳಿಗೆ ನಿಲ್ಲಲು ಮನೆಗಳನ್ನೂ, ಚಿಕ್ಕ ಮಕ್ಕಳಿಗೆ ಶಾಲೆಗಳನ್ನು ಈಗಾಗಲೇ ನಿರ್ಮಿಸಿದ್ದಾರೆ. ಒಲಂಪಿಕ್ ಕ್ಯಾಂಪಿನೊಳಗೆ ಚಿಕ್ಕ ಮಾಡನ್ನು ಕಟ್ಟಿ ಅದರಡಿಗೆ ಇವುಗಳನ್ನೆಲ್ಲಾ ಸೇರಿಸಿದ್ದಾರೆ. ಒಲಂಪಿಕ್ ಆಟಗಳು ಮುಗಿದು ಜಾತ್ರೆಯೂ ಮುಗಿದ ನಂತರ ಈ ಕಟ್ಟಡಗಳೆಲ್ಲಾ ದಿನನಿತ್ಯದ ಕಾರ್ಯಕ್ಕೆ ಉಪಯೋಗಿಸಲಾಗಿಸುವಂತವುಗಳು. (ಐ ಪಿ ಎಫ್)

ಗೋಪಾಲಗೌಡರ ನಿಧನ

ಸಮಾಜವಾದಿ ಪಕ್ಷದ ನಾಯಕರಾದ ಶ್ರೀ ಬಿ. ಗೋಪಾಲಗೌಡರು ಬೆಂಗಳೂರಿನಲ್ಲಿ ಇಂದು ನಿಧನರಾದರು.


**Contribute Liberally**

**to the National Defence Fund**

ವುಡ್‌ಲಾಂಡ್ 9-6-72ರಂದ 6ನೇ ವಾರ ಅಮೋಘ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ: ರಾಜಶ್ರೀ ಸಹೋದರರು ನಿರ್ಮಾಪಕರು: ಎಂ ಜಿ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಸಿಂಹಸ್ವಪ್ನ

ಅಪೂರ್ವ 9 6 72 ರಿಂದ

.... ಮನಮೋಹಕ ತಮಿಳು ಚಿತ್ರ ....

ಕರುಂದೇಳ್ ಕಣ್ಣಾಯಿರಂ

ಪಾತ್ರ— ಜೈ ಶಂಕರ್ (ದ್ವಿಪಾತ್ರದಲ್ಲಿ), ಲಕ್ಷ್ಮಿ, ಶಕುಂತಳಾ, ಮನೋಹರ್ ತೆಂಗಾಯಿ ಶ್ರೀನಿವಾಸ, ಮನೋರಮ

ದಿನ 3 ಆಟಗಳು



Edited Printedand Published by Dharmapracharanirata M S Krishna Rao ( Propretor ) at the Satvavadi Press Chamarajapuram Mysore 4



'ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ'
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
—, ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ಶವರ ಜೊಚ್ಚಲು ಚಿತ್ರ

ಅನೆ-ಹುಡುಗ

**SHAKTI**

**SUDHA**

**A Superb Tonic**

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

Quality Printing Neat Binding

**Lakshminarasimha Press**

Sivarampet, Mysore

**Help The Gorakshana**



— Humanitarian Propoganda Monthly ....